ಕೊಡಬೇಕು ಎನ್ನುವ ವಾದವನ್ನು ಸವರ್ಣೀಯ ಮನೋಧರ್ಮ ಪರಿಗಣಿಸಿಲ್ಲ. ಹೀಗಾಗಿಯೇ ಬೌದ್ಧ ಧರ್ಮವೂ, ಜೈನ ಧರ್ಮವೂ ಹಿಂದೂ ಧರ್ಮದ ಆಲದ ಮರದ ಕೆಳಗಿರಬಹುದಾದ ಭಿನ್ನ ಶಾಖೆಗಳಂತೆ ರೂಪಿಸಲು ಪ್ರಬಲರು ಪ್ರಯತ್ನಿಸಿದರೆ, ಆಯಾ ಧರ್ಮಾನುಯಾಯಿಗಳು ತಮ್ಮ ಭಿನ್ನತೆಯನ್ನು ನಿರೂಪಿಸಿ ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಯತ್ನದಲ್ಲಿರುತ್ತಾರೆ. ಸಿಖ್ ಧರ್ಮವನ್ನು ಕೇಶಧಾರಿ ಹಿಂದೂಗಳೆಂದು ಪರಿಗಣಿಸುವ ಪ್ರಯತ್ನವನ್ನು ನಾವು ಇಲ್ಲಿ ಮರೆಯುವಂತಿಲ್ಲ.

ಅಂಬೇಡ್ಕರ್ ಬಸವನ ಹುಳುವಿನ ಮೇಲೆ ಕುಳಿತಿರುವ ವ್ಯಂಗ್ಯಚಿತ್ರವನ್ನು ಚರ್ಚಿಸುತ್ತಾ ಶ್ಯಾಮ್ ಸುಂದರ್, ಕನ್ನಡ ದಲಿತ ಕವಿ ಸಿದ್ದಲಿಂಗಯ್ಯನವರ ಊರುಕೇರಿಯ ಒಂದು ಭಾಗವನ್ನು ನಮ್ಮ ಮುಂದಿಡುತ್ತಾರೆ. 'ಎಂದಿನಂತೆ ಹುಡುಗರೆಲ್ಲ ನಮ್ಮ ಮನೆಯ ಪಕ್ಕದ ಮೋಟುಗೋಡೆಯ ಮೇಲೆ ನಿಂತು ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನ್ನೊಬ್ಬ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು.' ಶ್ಯಾಮ್ ಈ ಘಟನೆಯನ್ನು ಉಲ್ಲೇಖಿಸಿ, ಅಂಬೇಡ್ಕರ್ ಅವರ ಚಿತ್ರಣದಲ್ಲಿ ಸವರ್ಣೀಯರಿಗೆ ವಿಡಂಬನೆಯಾಗಿ ಕಂಡದ್ದು ದಲಿತರಿಗೆ ಹೇಗೆ ಯಾತನೆಯಾಗುತ್ತದೆ ಎನ್ನುವುದನ್ನು ಗಟ್ಟಿಯಾಗಿ ಹೇಳುತ್ತಾರೆ.

ಅಂಬೇಡ್ಕರ್ ಅವರ **'Annihilation of Caste'** ಪುಸ್ತಕಕ್ಕೆ ಅರುಂಧತಿ ರಾಯ್ ಬರೆದ ಪುಸ್ತಕಗಾತ್ರದ ಪ್ರಸ್ತಾವನೆ—ಮುನ್ನುಡಿಯನ್ನು ಓದಿದಾಗ ಗಾಂಧಿಯವರ ವಿಚಾರಧಾರೆಯೊಂದಿಗೆ ಅಂಬೇಡ್ಕರ್‌ಗೆ ಇದ್ದದ್ದು ಕೇವಲ ಭಿನ್ನಾಭಿಪ್ರಾಯವಲ್ಲ ಎನ್ನುವುದು ನಮಗೆ ಕಾಣಿಸುತ್ತದೆ. ಹೀಗಾಗಿಯೇ ಈ ಅಂಬೇಡ್ಕರ್ ವ್ಯಂಗ್ಯಚಿತ್ರಗಳ ಪುಸ್ತಕ ಒಂದು ಸ್ಪಷ್ಟವಾದ ಮತ್ತು ಪ್ರಬಲವಾದ ವಾದವನ್ನು ನಮ್ಮ ಮುಂದಿಡುತ್ತದೆ. ಹಾಸ್ಯ ಸಂವೇದನಾಹೀನವಾಗಿರಬಾರದು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಾವೇ ಕಡಿವಾಣ ಹಾಕಿಕೊಳ್ಳಬೇಕು. ಅಭಿವ್ಯಕ್ತಿ ಲೇವಡಿಯಾಗಬಾರದು. ಹಾಗೂ ಪ್ರಬಲ ಸವರ್ಣೀಯರು ಎಲ್ಲರನ್ನೂ ತಮ್ಮಲ್ಲಿ ಸೇರಿಸಿಕೊಳ್ಳುತ್ತಾ ತಮ್ಮ ವಿಚಾರಧಾರೆಯ ಉಪನದಿಯಂತೆ ವಶಪಡಿಸಿಕೊಂಡು ಹೋದರೂ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ, ದಲಿತರಿಗೆ ತಮ್ಮದೇ ಭಿನ್ನವಾದ ಅಸ್ತಿತ್ವವಿದೆ. ಅದರ ಸೂಕ್ಷ್ಮಪ್ರಜ್ಞೆ ಭಿನ್ನವಾಗಿದೆ. ಅದನ್ನು ಗುರುತಿಸುವುದು ಮುಖ್ಯ ಎನ್ನುವುದನ್ನು ಮರೆಯಬಾರದು.

ಅನೇಕ ನೆಲೆಗಳಲ್ಲಿ ನಮ್ಮನ್ನು ತಟ್ಟುವ ಈ ಪುಸ್ತಕ, ತಕ್ಷಣದ ಇತಿಹಾಸದ ಅನೇಕ ಪ್ರಶ್ನೆಗಳನ್ನು ಮತ್ತೆ ಎತ್ತುತ್ತದೆ. ಅವನ್ನು ವಿಚಾರಣೆಗೆ ಒಡ್ಡುತ್ತದೆ. ನಮ್ಮ ಮುಂದೆ ಒಂದು ಕನ್ನಡಿಯನ್ನು ಇಡುತ್ತದೆ. ಹಾಗೂ ಚರಿತ್ರೆಯನ್ನು ಮತ್ತು ಅದರ ಎಲ್ಲ ಏರುಪೇರುಗಳು ಕಸಕಡ್ಡಿಗಳನ್ನು ನಾವು ಮತ್ತೆ ಜೀವಿಸುವಂತೆ ಮಾಡುತ್ತದೆ. ಹೀಗಾಗಿ, ಇದು **'No Laughing Matter.'** ವ್ಯಂಗ್ಯಚಿತ್ರಗಳಲ್ಲಿರುವ ಗಂಭೀರ ಪ್ರಶ್ನೆಗಳನ್ನು, ಚರಿತ್ರೆಯಲ್ಲಿ ನಡೆದಿರಬಹುದಾದ ಅನ್ಯಾಯಗಳನ್ನು ಮತ್ತ ಉಲ್ಲೇಖಿಸುವುದಲ್ಲದೆ, ಆ ಅನ್ಯಾಯದ ವ್ಯಾಖ್ಯೆಯನ್ನೂ ಕೃತಿ ಪ್ರಶ್ನಿಸುತ್ತದೆ. ಎಲ್ಲರೂ ಹಿಂದೂಗಳೆಂದು ನಿರೂಪಿಸಹೊರಟಿರುವ ಈ ಸಂದರ್ಭದಲ್ಲಿ ಒಂದು ಎಚ್ಚರಿಕೆಯ ಅಸ್ಮಿತೆಯ, ಘನತೆಯ ಮಾತನ್ನು ಈ ಪುಸ್ತಕ ಎತ್ತಿಹಿಡಿಯುತ್ತದೆ. ಹೀಗಾಗಿಯೇ ಇದು ಒಂದು ಗಂಭೀರ, ಉತ್ತಮ, ಮತ್ತು ಮುಖ್ಯವಾದ ಪುಸ್ತಕ.